


ತಾಳಮದ್ದಲೆಯಲ್ಲಿ ಮಗ್ನರಾದ ಕಲಾವಿದರ ತಂಡ

ಹೇಳಿದ್ದಾನೆ. ಇವಾಗ 'ಸುದರ್ಶನ ವಿಜಯ' ಪ್ರಸಂಗವನ್ನು ಕಾಲೇಜ್ ಮಕ್ಕಳತ್ರ ಆಡಿಸ್ತಾನಂತೆ. ಈ ಆಟ ನೋಡ್ಲಿಕ್ಕೆ ಬಾ ಅಂದಿದ್ದ. ಅಲ್ದೆ ಈ ಪ್ರಸಂಗ ಬಾರೀ ಚಂದ ಉಂಟು. ಎಂತಕ್ಕೆ ಅಂದ್ರೆ ಇದ್ರಲ್ಲಿ ಬರುವ ವೇಷಗಳು, ಅಂದ್ರೆ ಬಣ್ಣದ ವೇಷ, ಪಗಡಿ ವೇಷ, ಸ್ತ್ರೀವೇಷ, ಕಿರೀಟ ವೇಷ, ಹಾಸ್ಯ ಎಲ್ಲವೂ ಆಟವನ್ನು ಭಾರೀ ರೈಸುವ (ವಿಜೃಂಭಿಸುವ) ಹಾಗೆ ಮಾಡ್ತದೆ, ಅದ್ಕೆ' ಅಂದೆ.

'ಅಲ್ಲಾ, ನಿನ್ನ ತಮ್ಮನಿಗೆ ಆಟದಲ್ಲಿ ಹೇಗೆ ಅಷ್ಟು ಆಸಕ್ತಿ ಬಂದದ್ದು? ನಿಮ್ಮನೇಲಿ ಯಾರಾದ್ರು ಆಟದಲ್ಲಿ ಭಾಗವಹಿಸ್ತಿದ್ರಾ?' ಕೇಳಿದ್ಲು ಸವಿತಾ. ಆಗ ನಾನು ನಮ್ಮಪ್ಪನ ಯಕ್ಷಗಾನದ ಕಥೆ ಅವ್ಳಿಗೆ ಹೇಳ್ಬೇಕಾಯ್ತು. ದಕ್ಷಿಣ ಕನ್ನಡದಲ್ಲಿ ತೆಂಕುತಿಟ್ಟು ತುಂಬ ಪ್ರಸಿದ್ಧ. ನಮ್ಮ ಅಪ್ಪ ರಾಮಕೃಷ್ಣ ಭಟ್ ಯಕ್ಷಗಾನ ಅರ್ಥಧಾರಿ. ಅವ್ರು ಚಿಕ್ಕೋರಿರುವಾಗ 'ಸ್ತ್ರೀವೇಷ' ಹಾಕ್ತಾ ಇದ್ರಂತೆ. ಒಮ್ಮೆ 'ಸೀತಾಪಹರಣ' ಪ್ರಸಂಗದಲ್ಲಿ ಸೀತೆಯ ಪಾತ್ರ ಮಾಡಿದ್ರು. ಅವರ ನಟನೆ ಎಷ್ಟು ನೈಜವಾಗಿತ್ತೆಂದ್ರೆ ಆಟ ಮುಗಿದು ಚೌಕಿ (ಗ್ರೀನ್‌ರೂಂ)ಗೆ ಹೋದಾಗ ಒಬ್ಬ ಯುವಕ ಓಡೋಡಿ ಬಂದ್ನಂತೆ. ಸ್ತ್ರೀವೇಷ ಮಾಡಿದ ಸೀತೆ, ಹುಡುಗಿ ಅಂತನೇ ಅಂದ್ಕೊಂಡಿದ್ದ ಆ ಯುವಕ ನಮ್ಮ ಅಪ್ಪನ ಹತ್ರ, ನಾನು ನಿಮ್ಮ ಪಾತ್ರ ನೋಡಿದ್ಮೇಲೆ ನಿಮ್ಮನ್ನೇ ಮದುವೆಯಾಗಬೇಕು ಎನ್ನುವ ಪ್ರೀತಿ ಆಗಿದೆ. ನನ್ನನ್ನು ಮದುವೆಯಾಗ್ತೀರಾ? ಅಂತ ಕೇಳಿದ್ನಂತೆ. ಅಷ್ಟು ನೈಜ ಅಭಿನಯ ನಮ್ಮಪ್ಪನದು ಆಗಿತ್ತು' ಎಂದೆ. ಅವ್ಳಿಗೂ ನಮ್ ಕಥೆ ಕೇಳಿ ಕುಶಿ ಆಯ್ತು.

ಆಟದ ಬಗ್ಗೆ ಮಾತಾಡಿದ ಮೇಲೆ ನಮ್ಮ ಮಾತು ಕಂಬ್ಳದ ಬದಿಗೆ ತಿರುಗ್ತು. ಕಂಬಳದ ಬಗ್ಗೆನೂ ಒಂದೆರಡು ಮಾತು ಹೇಳ್ತೇನೆ ಕೇಳು ಎಂದೆ. ಅವ್ಳು ಹೂಂ, ಹೇಳು ಎಂದ್ಲು. ಕಂಬ್ಳದ ಬಗ್ಗೆ ಗೊತ್ತಿದ್ರೂ ಅವ್ಳಿಗೆ ನನ್ ಬಾಯಲ್ಲಿ ಕಂಬಳದ ವಿವರ ಕೇಳುವಾಸೆ. ಕಾಂತಾರ ಸಿನಿಮಾ ನೋಡಿದ್ದೀಯಾ ಕೇಳ್ದೆ. ಹೌದು ಅಂದ್ಲು. ಅದ್ರಲ್ಲಿ ಕಂಬ್ಳದ ಸೀನ್ ಬರ್ತದೆ. ನಮ್ ಜಿಲ್ಲೆಯಲ್ಲಿ ಕಂಬಳ ಅನ್ನೋದು ಒಂದು ಜಾನಪದ ಕ್ರೀಡೆ. ಎರಡು ಕೋಣಗಳನ್ನು ನೊಗಕ್ಕೆ ಕಟ್ಟಿ ಕೆಸರಿನ ಗದ್ದೆಯ ಟ್ರ್ಯಾಕ್‌ನಲ್ಲಿ ಓಡಿಸುದು. ಕೋಣಗಳನ್ನು ಓಡಿಸುವವನು ಅವುಗಳ ಹಿಂದಿನಿಂದ ಓಡ್ಬೇಕು. ಜೋಡುಕೆರೆ ಕಂಬಳ ಇಲ್ಲಿ ಬಹಳ ಫೇಮಸ್. ಸೂರ್ಯ–ಚಂದ್ರ, ಮೂಡು–ಪಡು, ಲವ–ಕುಶ, ಜಯ–ವಿಜಯ, ವಿಜಯ–ವಿಕ್ರಮ ಮತ್ತು ಕೋಟಿ–ಚೆನ್ನಯ ಮುಂತಾದ ಕಂಬಳ ಜೋಡಿಗಳು ಜನರಿಗೆ ಮನರಂಜನೆ ಕೊಡ್ತದೆ, ಹೀಗಾಗಿ ಪ್ರತೀವರ್ಷ ಇದೊಂದು ಹಬ್ಬ ಅನ್ನೋ ಹಾಗೆ ನಡ್ಕೊಂಡು ಬಂದಿದೆ.

ಕಂಬಳ ಅಂತ ಹೇಳಿದಾಗ ಇನ್ನೊಂದು ವಿಷ್ಯ ನೆನಪಿಗೆ ಬರ್ತದೆ. ಕಳೆದ ವರ್ಷ ಉಪ್ಪಿನಂಗಡಿಯಲ್ಲಿ ನಡೆದ ಜೋಡುಕೆರೆ ಕಂಬಳ ನೋಡ್ಲಿಕ್ಕೆ ನಾನೂ ಹೋಗಿದ್ದೆ. ಅದು ವಿಜಯ–ವಿಕ್ರಮ ಕಂಬಳ. ನೇತ್ರಾವತಿ ಹೊಳೆ ದಂಡೆಯಲ್ಲಿ ಹಾಕಿದ ಕಂಬಳ ಟ್ರ್ಯಾಕ್‌ನಲ್ಲಿ ಜೋಡಿ ಕೋಣಗಳನ್ನು ಓಡಿಸುವುದನ್ನು, ಕೋಣಗಳು ಶೌರ್ಯ ಮೆರೆಯುವುದನ್ನು ನೋಡೋದೇ ಚಂದ. 'ಉಬಾರ್ ಕಂಬಳೋತ್ಸವ' ಎನ್ನುವ ಈ ಕಂಬಳದಲ್ಲಿ ಉಪ್ಪಿನಂಗಡಿ ಮಾತ್ರವಲ್ಲ ನೆರೆಯ ಹತ್ತಾರು ಗ್ರಾಮಗಳ ಜನರು ಸೇರಿದ್ರು. ಕಂಬಳದ ಜೊತೆಗೆ ನೇತ್ರಾವತಿ ಹಿನ್ನೀರಿನಲ್ಲಿ ಬೋಟಿಂಗ್, ಆಹಾರ ಮೇಳ, ಸಸ್ಯಮೇಳ, ಮಕ್ಕಳ ಮನೋರಂಜನಾ ಕಾರ್ಯಕ್ರಮ ಎಲ್ಲ ನಡೀತು. ಜಾತ್ರೆಯ ಹಾಗೆ. ಕಂಬಳದ ನೆಪದಲ್ಲಿ ಚರ್ಮುರಿ, ಐಸ್‌ಕ್ಯಾಂಡಿ, ಪಾಪ್‌ಕಾರ್ನ್ ತಿಂದು ನಾವು ಅಲ್ಲಿಂದ ಹೊರಟೆವು. ಏ, ಇನ್ನೊಮ್ಮೆ ಕಂಬ್ಳಕ್ಕೆ ಹೋಗೋವಾಗ ನನ್ನನ್ನೂ ಕರ್ಕೊಂಡು ಹೋಗು ಆಯ್ತಾ ಅಂದ್ಲು.



ಕಳೆದ ವಾರದ 'ಚೆನ್ನುಡಿ'
'ಕೂಡ್ಲಿಗಿ ನೋಡ್ ಬರ್ರೀ' ಕೇಳಿ...
ದೀಪಶ್ರೀ ಎಸ್. ಕೂಡ್ಲಿಗಿ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

## ಬಾಲ್ಯವೇ ಚಂದ!

ನಮ್ಮ ಬಾಲ್ಯದ ಘಟನೆಗಳ ಬಗ್ಗೆನೂ ಕೇಳಿದ್ಲು. ಅವ್ಳಿಗೆ ಇಷ್ಟ ಅಂತ ಕೆಲವು ಹಳೆಯ ನೆನಪುಗಳನ್ನು ಕೆದಕಿ ಹೇಳ್ದೆ. ಊರಿನಲ್ಲಿದ್ದಾಗ ಒಮ್ಮೆ ಉಶಾರಿರಲಿಲ್ಲ. ವೇಣೂರಿನ ಡಾ. ಜಗದೀಶ ಚೌಟರ ಕ್ಲಿನಿಕ್‌ಗೆ ಹೋದೆ. ಒಳಗೆ ರೋಗಿ ಇದ್ದವನು ಡಾಕ್ಟ್ರ ಹತ್ರ ಮಾತಾಡೋದು ಕೇಳಿಸ್ತಾ ಇತ್ತು. 'ಡಾಕುಟ್ರೆ, ಎಂಕ್ ಸೀತ, ತೆಮ್ಮ ಕಮ್ಮಿನೇ ಆಪುಜ್ಜಿ. ಒಂಜಿ ಇಂಡೆಷನ್ ಕೊರ್ಲೆ' (ಡಾಕ್ಟರೇ ನಂಗೆ ಶೀತ, ಕೆಮ್ಮು ಕಡಿಮೆನೇ ಆಗ್ತಿಲ್ಲ, ಒಂದು ಇಂಜೆಕ್ಷನ್ ಕೊಡಿ) ಆಗ ಡಾಕ್ಟರ್, ಇಂಡೆಷನ್ ಬೊಡ್ಚಿ, ಮಾತ್ರೆಡ್ ಪೋಪುಂಡು (ಇಂಜೆಕ್ಷನ್ ಬೇಡ, ಮಾತ್ರೆಯಲ್ಲೇ ವಾಸಿಯಾಗ್ತದೆ) ಅಂದ್ರು. ಆ ರೋಗಿಗೆ ಸಮಾಧಾನವೇ ಇಲ್ಲ. ಮಾತ್ರೆ ತೆಕ್ಕೊಂಡು ಹೊರಗೆ ಬಂದ. ಹೆಂಡತಿ ಹೊರಗೆ ಕುಳಿತಿದ್ದವಳು, 'ದಾದ ಪಂಡೆರ್, ಇಂಡೆಷನ್ ಕೊರಿಯೆರಾ?' (ಏನು ಹೇಳಿದ್ರು, ಇಂಜೆಕ್ಷನ್ ಕೊಟ್ರಾ) ಅಂತ ಕೇಳಿದ್ಲು. ಆಗ 'ಇಜ್ಜಿ ದೇ, ಮಾತ್ರೆ ಮಾಂತ್ರ ಕೊರಿಯೆರ್' (ಇಲ್ಲ ಮಾರಾಯ್ತಿ, ಮಾತ್ರೆ ಮಾತ್ರ ಕೊಟ್ರು) ಅಂದ. ಸಪ್ಪೆ ಮುಖ ಮಾಡಿದ ಗಂಡ–ಹೆಂಡತಿ ಅಲ್ಲಿಂದ ಪದ್ರಾಡ್ (ಕಾಲು ಕೀಳೋದು). ಹೀಗೆ ನಮ್ಮೂರಲ್ಲಿ ಜನರಿಗೆ ಸಾಮಾನ್ಯ ಶೀತವೇ ಬರಲಿ, ಜ್ವರವೇ ಬರಲಿ ಇಂಜೆಕ್ಷನ್ ಕೊಟ್ಟರೇ ವಾಸಿಯಾಗ್ತದೆ ಅಂತ ಭಾವನೆ ಈಗಲೂ ಇದೆ.

ಇನ್ನು, ಶಾಲೆಗಳಲ್ಲಿ ಟೀಚರ್ ಪಾಠ ಮಾಡುವ